


ಎಡದಿಂದ ಬಲಕ್ಕೆ:

1. ಅವಕಾಶ ಸಿಕ್ಕಿದರೆ ಅಭಿವೃದ್ಧಿ, ಬೆಳವಣಿಗೆ (3)
3. ಅಜಗರದ ಕಾವಲಲ್ಲಿ ಪುಷ್ಟಿಕರ ಹಣ್ಣು (3)
4. ರಾಮಮೂರ್ತಿಯ ಜೊತೆಗೇ ಅವನ ಭಂಟ (3)
6. ದೇಶವೇನೇ ಇರಲಿ, ಮನೆ ಮಾತ್ರ ಅದೇ (3)
7. ವಿರಸ ಕಾರುವಂತೆಯೇ ಜ್ವಾಲಾಮುಖಿಯ ಶಿಲಾಪಾಕ (4)
9. ಪಕ್ಕದಲ್ಲೇ ಬಂತು ಉದ್ದ ಕಾಲಿನ ಬೆಳ್ಳಕ್ಕಿ (4)
11. ಎಂಥ ರಭಸ! ರುಚಿಗೆ ಹಾನಿ ಖಂಡಿತ (4)
13. ಅವನದೇ ವಸತಿಯಲ್ಲಿ ಹೊಸ ಹೆಂಡತಿ (4)
15. ಹೊಸದಾದ ವನದಲ್ಲಿ ಮಲೆನಾಡಿನ ಶಹರ (3)
17. ಊರನ್ನೆಲ್ಲ ಸರಿಪಡಿಸಲು ಒಳ್ಳೇ ಸಹಾಯ (3)
18. ಮೆಲ್ಲ ಮೆಲ್ಲನೇ ಬಂದು ಒಂದುಗೂಡಿದ್ದು (3)
19. ಸೋಲಿಗೆ ಸಿಲುಕದಂತೆ ಹೇಗಾದರೂ ಮಾಡು (3)

ಮೇಲಿಂದ ಕೆಳಕ್ಕೆ:

1. ಸಾವಿರ ರೀತಿಯಲ್ಲಿ ಬರೀ ವೈಮನಸ್ಯ (3)
2. ಮೊಸರಿನ ರುಚಿ ಯಾವಾಗಲೂ ಒಂದೇ (3)
3. ಅಬ್ಬರಿಸಲು ಸೂಕ್ತವಾದ ವಸ್ತ್ರ ಹೀಗೆ (3)
5. ಕರುವನ್ನು ತಿರುಗಾಡಿಸಲು ತಕ್ಕ ಅಲೆಮಾರಿ (3)
7. ಲಂಬಾಕಾರ ಹೊಂದಿಸಿದರೆ ಗಳಿಕೆ ಹೆಚ್ಚಿಸಲು ದಾರಿ (4)
8. ವಾಹನ ಸರಿಪಡಿಸುವವರ ಜೊತೆಗಾರಿಕೆ (4)
9. ಢಂಬತನ ತೋರಿ ತೋರಿ ಈಗ ಬರೀ ದಾರಿದ್ರ್ಯ (4)
10. ಆ ತರಗತಿಯಲ್ಲಿ ಪಕ್ಷಿ ವೇಗದ ಮುನ್ನಡೆ (4)
12. ಬೇವಿನಂತಹ ಕಹಿ ಮನೋಭಾವ (3)
14. ಅದಂತೂ ವಿದೇಶದವನದೇ ಮುಖ (3)
15. ಅಲ್ಲಿನ ಹವೆಗೆ ಒಪ್ಪವಾದ ಪಾದರಕ್ಷೆ (3)
16. ಮುನಿಸೇಕೆ? ಸುಮ್ಮನೇ ಕೈ ಮುಗಿ (3)

### ಪದಬಂಧ 14-03-2013 ರ ಉತ್ತರಗಳು

ಎಡದಿಂದ ಬಲಕ್ಕೆ:

1. ಪದಕ; 3. ತರಾವರಿ; 4. 'ಳಮರಿಪ' (ಪರಿಮಳ ಹಿಂದುಮುಂದು); 6. ಸಪ್ಪಳ; 7. ಮರುಮಾತು; 9. ಪಲಾಯನ; 11. ರವಿವಾರ; 13. ಕೆಟ್ಟಕಾಲ; 15. ಅನಾದಿ; 17. ಬಡಿವಾರ; 18. ಕಡಿವಾಣ; 19. ಕರ್ತಾರ.

ಮೇಲಿಂದ ಕೆಳಕ್ಕೆ:

1. ಪರಿಹಾಸ; 2. ಕಳವಳ; 3. ತಕರಾರು; 5. ಪರಕೀಯ; 7. ಮಧುರ; 8. ತುಷಾರ; 9. ಪತಾಕೆ; 10. ನಕುಲ; 12. ವಿದ್ಯುತ್ಕಂಬ; 15. ಅಧ್ಯಾಪಕ; 14. ಕಾಡುಕೋಣ; 16. ದಿನಕರ.

# ಪ್ರಶ್ನಾಂಕಣ

## ಬೃಹತ್ ದೇಹ - ಅನುಕೂಲ ಏನು?

ಆನೆ, ಘೇಂಡಾ, ಹಿಪ್ಪೊ, ಜಿರಾಫೆ, ತಿಮಿಂಗಿಲ... ಇಂಥವೆಲ್ಲ ಪ್ರಾಣಿಗಳ ಪರಮ ವೈಶಿಷ್ಟ್ಯ ಅವುಗಳ ಬೃಹದ್ದೇಹ ಹೌದಲ್ಲ? ಹಿಂದೆ ಧರೆಯನ್ನಾಳಿದ ಡೈನೋಸಾರ್‌ಗಳಂತೂ ಅವುಗಳ ಪರಮ ಗಾತ್ರಗಳಿಂದಲೇ ಇಂದೂ ಸುಪ್ರಸಿದ್ಧ-ಅಲ್ಲವೇ? ಮೂಲತಃ ಬೃಹತ್ ದೇಹಿಗಳನ್ನು ಸೃಷ್ಟಿಸುವ ಪ್ರಯೋಗವನ್ನು ಪ್ರಕೃತಿ ಆರಂಭಿಸಿದ್ದು ಡೈನೋಸಾರ್‌ಗಳಿಂದಲೇ. ಈಗ್ಗೆ ಇನ್ನೂರು ದಶಲಕ್ಷ ವರ್ಷ ಹಿಂದಿನ 'ಜ್ಯೂರಾಸಿಕ್ ಯುಗ'ದಲ್ಲಿ ಅವತರಿಸಿದ 'ಸಾರೋಪಾಡ್'ಗಳು (ಎಂದರೆ ಭಾರೀ ಗಾತ್ರದ ಡೈನೋಸಾರ್‌ಗಳು) ಕಲ್ಪನಾತೀತ ಗಾತ್ರ-ತೂಕ ತಲುಪಿದ್ದುವು. 150 ಅಡಿಗೂ ಹೆಚ್ಚು ಉದ್ದದ, 100 ಟನ್‌ಗೂ ಅಧಿಕ ತೂಕದ ಶರೀರ ಅವುಗಳದು.

ಅದೆಲ್ಲ ಸರಿ. ದೈತ್ಯ ಶರೀರಗಳಿಗೆ ವಿಶೇಷ ಅನುಕೂಲ ಏನಾದರೂ ಇದೆಯೇ?

ಖಂಡಿತ ಒಂದಲ್ಲ ಎರಡಲ್ಲ ಹಲವಾರು ಅನುಕೂಲಗಳಿವೆ. ಅತ್ಯಂತ ಪ್ರಮುಖವಾಗಿ-

* ಬೃಹತ್ ದೇಹಿಗಳಿಗೆ ಬೇಟೆಗಾರ ಶತ್ರುಗಳ ಕಾಟ ಅತ್ಯಂತ ಕಡಿಮೆ. ಮರಿ ಹಂತದಲ್ಲಿರುವಾಗಲೂ ದೈತ್ಯ ಮಾತೆಯ ನೆರಳಲ್ಲಿರುವಾಗ ಸಾಮಾನ್ಯ ಬೇಟೆಗಾರ ಪ್ರಾಣಿ ಯಾವುದೂ ಸಮೀಪ ಸುಳಿಯುವುದೂ ಇಲ್ಲ.

* ದೈತ್ಯ ಗಾತ್ರದ ಪ್ರಾಣಿಗಳಿಗೆ ಆಹಾರ ಸುಲಭ ಲಭ್ಯ. ಆನೆ, ಜಿರಾಫೆಗಳಂತಹ ಸಸ್ಯಾಹಾರಿಗಳಿಗಂತೂ ಇತರ ಮೇಯುವ ಪ್ರಾಣಿಗಳಿಗೆ ಎಟುಕದ, ವೃಕ್ಷಗಳ ಶಿರದ ಎಲೆ-ಎಳೆ ರೆಂಬೆಗಳೂ ನೆಲದಿಂದಲೇ ನಿಲುಕುತ್ತವೆ. ಹುಲಿ ಸಿಂಹಗಳಂತಹ ದೊಡ್ಡ ದೇಹದ ಬೇಟೆಗಾರರಿಗೆ ದೊರಕುವ ಬಲಿ ಪ್ರಾಣಿ ವಿಧಗಳು ಚಿಕ್ಕ ದೇಹದ ಬೇಟೆಗಾರರಿಗಿಂತ ಬಹಳ ಹೆಚ್ಚು.

* ದೇಹ ಗಾತ್ರ ಹೆಚ್ಚಿದ್ದಷ್ಟೂ ಶರೀರದ ತೂಕಕ್ಕೆ ಹೋಲಿಸಿದಂತೆ ಆಹಾರದ



ಅಗತ್ಯ ಕಡಿಮೆ. ಇಲಿಗಳು ಪುಟ್ಟ ಹಕ್ಕಿಗಳು ಪ್ರತಿದಿನ ಅವುಗಳ ದೇಹ ತೂಕದ ಶೇ. 50 ರಿಂದ ಶೇ. 100 ರಷ್ಟು ಆಹಾರ ಸೇವಿಸುತ್ತವೆ. ಆದರೆ ಆನೆಯೊಂದಕ್ಕೆ ಅದರ ತೂಕದ ಶೇಕಡ 5 ರಷ್ಟೇ ಆಹಾರ ಸಾಕು.

* ಶರೀರ ದೊಡ್ಡದಿದ್ದಷ್ಟೂ ಶರೀರದ ಶಾಖ ನಷ್ಟ ಕಡಿಮೆ. ಹಾಗೆಂದರೆ ಪಾರಿಸರಿಕ ಉಷ್ಣತಾ ಮಟ್ಟದ ವಿಶೇಷವಾಗಿ ಶೀತ ಪ್ರಮಾಣದ ತೀವ್ರ ಏರುಪೇರುಗಳನ್ನೂ- ಬೃಹದ್ದೇಹಿಗಳು ಸಲೀಸಾಗಿ ಸಹಿಸುತ್ತವೆ.

ಹಾಗೆಂದು ಬೃಹತ್ ಶರೀರದಿಂದ ಅನನುಕೂಲಗಳು ಏನೂ ಇಲ್ಲವೆಂದಲ್ಲ. ಅಂಥ ಪ್ರಾಣಿಗಳಿಗೆ ಬೇಕಾಗುವ ಭಾರೀ ಪ್ರಮಾಣದ ಆಹಾರ ನೀರು ಮತ್ತು ಸ್ಥಳಾವಕಾಶಗಳಿಂದಾಗಿ ಅವುಗಳ 'ಪ್ರಭೇದ ಸಂಖ್ಯೆ' ಮತ್ತು 'ಜನ ಸಂಖ್ಯೆ' ತುಂಬ ಸೀಮಿತ; ಚಿಕ್ಕ ಗಾತ್ರದ ಪ್ರಾಣಿಗಳಲ್ಲಿರುವಷ್ಟು ವೈವಿಧ್ಯ ಬೃಹತ್ ದೇಹಿಗಳಲ್ಲಿಲ್ಲ.

■ ಎನ್. ವಾಸುದೇವ್